<u>ಅಸಲು ದಾವಾ ಸಂಖ್ಯೆ: **- 137/2024**</u> ಪಿ.ಡಬ್ಲ್ಯೂ.**:-1**

ದಿನಾಂಕಃ **02-09-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಸರ್ವೇ ನಂ.9/7 ರ ಆಸ್ತಿಯನ್ನು ಎಂ.ರೇವಣಸಿದ್ದಪ್ಪ ಬಿನ್ ತಿಪ್ಪಣ್ಣರವರಿಂದ ನಾನು ಮತ್ತು ನನ್ನ ತಂಗಿ ಹೆಚ್ ಬಿ ಶೋಭರವರು ಖರೀದಿ ಮಾಡಿರುತ್ತೇವೆ. ಸರ್ವೇ ನಂ.9/7 ರಲ್ಲಿ 28 ಗುಂಟೆ ಜಮೀನು ಇರುತ್ತದೆ. ಸದರಿ 28 ಗುಂಟೆ ಜಮೀನು ನನ್ನ ಮತ್ತು ನನ್ನ ತಂಗಿಯ ಹೆಸರಿನಲ್ಲಿ ಜಂಟಿಯಾಗಿರುತ್ತದೆ. ಈ ದಾವೆಯಲ್ಲಿ ನನ್ನ ತಂಗಿ ಶೋಭರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂಗಿಯ ಪರವಾಗಿ ನಾನೇ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ 28 ಗುಂಟೆ ಜಮೀನಿನಲ್ಲಿ ಬೆಳೆಯನ್ನು ಬೆಳೆಯುತ್ತಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಜಮೀನನ್ನು ಸೈಟುಗಳನ್ನಾಗಿ ಪರಿವರ್ತಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಹದ್ದುಬಸ್ತು ಮಾಡಿದ ನಂತರ ಖರೀದಿ ಮಾಡಿರುತ್ತೇವೆ. ಹದ್ದುಬಸ್ತು ಮಾಡಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಹದ್ದುಬಸ್ತು ದಾಖಲೆಯನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.